# ಸಾಮೂಹಿಕ ಮದುವೆಯಲ್ಲಿ ಬಾಲ್ಯ ವಿವಾಹ ನಡೆದಲ್ಲಿ ಸಂಘಟಕರೇ ಮುಖ್ಯ ಅಪರಾಧಿಗಳು

**ತಾವು ಸಾಮೂಹಿಕ ಮದುವೆ ಮಾಡಲು, ಭಾಗಿಯಾಗಲು ಅಥವಾ ನಿಮ್ಮ ಕುಟುಂಬದ ಸದಸ್ಯರ ಮದುವೆ ಮಾಡಲು ಹೊರಟಿದ್ದರೆ ಈ ಕೆಳಗಿನ ಎಲ್ಲಾ ನೀತಿ, ನಿಯಮಗಳನ್ನು ಪಾಲಿಸಿ.**

**ತಪ್ಪಿದಲ್ಲಿ ಕಾನೂನಿನ ಬಲೆಗೆ ಸಿಲುಕುತ್ತೀರಿ, ಎಚ್ಚರಿಕೆ !**



- ಸಾಮೂಹಿಕ ಮದುವೆ ಮಾಡುವ ಸಂಘಟಕರು, ಸಂಸ್ಥೆಗಳು ಕನಿಷ್ಠ 3 ತಿಂಗಳ ಮುಂಚಿತವಾಗಿ ನಿಗಧಿತ ನಮೂನೆಯಲ್ಲಿ ಸ್ಥಳೀಯ ತಹಶೀಲ್ದಾರರು / ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ಅರ್ಜಿ ಸಲ್ಲಿಸಿ ಲಿಖಿತ ಅನುಮತಿ ಪಡೆಯಬೇಕು.
- ಸಾಮೂಹಿಕ ಮದುವೆಯಲ್ಲಿ ಮದುವೆಯಾಗುವ ವಧು ವರರ ಬಗ್ಗೆ ಈ ಕೆಳಗಿನ ಎಲ್ಲಾ ದಾಖಲೆಗಳನ್ನು ಪಡೆದು 1 ತಿಂಗಳು ಮುಂಚಿತವಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.
- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿದ ಜೋಡಿಗಳಿಗೆ ಮಾತ್ರ ಮದುವೆ ಆವಕಾಶ ದೊರಯುತ್ತದೆ.
- ಸ್ಥಳೀಯ ಪೊಲೀಸ್ ಠಾಣೆಗೆ ಲಿಖಿತ ವಿವರ ಇರುವ ಮಾಹಿತಿ ನೀಡಬೇಕು.

**ಸಲ್ಲಿಸಬೇಕಾದ ದಾಖಲೆಗಳು :**

1. ವಧು ವರರು ಅಥವಾ ಕುಟುಂಬದವರು ಸಂಸ್ಥೆಗೆ ಸಲ್ಲಿಸಿದ ಅರ್ಜಿ.
2. ವಾಸಸ್ಥಳ ದೃಢೀಕರಣ ಪತ್ರ.
3. ವಯಸ್ಸಿನ ದೃಢೀಕರಣ ಪತ್ರ. (ಹೆಣ್ಣಿಗೆ 18 ವರ್ಷ ಮತ್ತು ಗಂಡಿಗೆ 21 ವರ್ಷ ಕಡ್ಡಾಯವಾಗಿ ಪೂರ್ಣವಾಗಿರಬೇಕು)
4. ಭಾವಚಿತ್ರ. (3 ಪ್ರತಿ ವಧು - ವರರದ್ದು)

- ಮದುವೆಗೆ ಮೂಲ ಜನನ ಪ್ರಮಾಣ ಪತ್ರ, ಶಾಲೆಯಲ್ಲಿ ಮುಖ್ಯ ಶಿಕ್ಷಕರು ನೀಡಿದ ವಯಸ್ಸಿನ ದೃಢೀಕರಣ ಪತ್ರ, ಜಿಲ್ಲಾ ಶಸ್ತ್ರಚಿಕಿತ್ಸಕರು (ಸರ್ಜನ್) ಅಥವಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯರು ನೀಡಿದ ವಯಸ್ಸಿನ ದೃಢೀಕರಣ ಪತ್ರಗಳು" ಮಾತ್ರ" ಅರ್ಹವಾಗಿರುತ್ತವೆ.
- ಪಿಡಿಓ, ಪಂಚಾಯಿತಿ ಕಾರ್ಯದರ್ಶಿಗಳು, ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ನಗರಸಭೆ ಅಧ್ಯಕ್ಷರು, ಸದಸ್ಯರು ಹಾಗೂ ಇತರೆ ಜನ ಪ್ರತಿನಿಧಿಗಳು, ಇತರ ಯಾವುದೇ ಅಧಿಕಾರಿಗಳು ಅಥವಾ ವೈದ್ಯರು ನೀಡಿದ ವಯಸ್ಸಿನ ದೃಢೀಕರಣ ಪತ್ರ' ಮದುವೆಗೆ ಮಾನ್ಯವಾಗುವುದಿಲ್ಲ ಹಾಗೂ ಅರ್ಹವಲ್ಲ.

**18 ವರ್ಷದೊಳಗಿನ ಹೆಣ್ಣು, 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ (ಬಾಲ್ಯ ವಿವಾಹ) ನಿಗದಿಯಾಗಿರುವುದು ತಿಳಿದುಬಂದಲ್ಲಿ ತಕ್ಷಣ ಈ ಕೆಳಕಂಡ ಇಲಾಖೆಗಳಿಗೆ ದೂರು ಕೊಡಿ.**

1. ರಾಜ್ಯ ಮಟ್ಟ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ಬೀದಿ, ಬೆಂಗಳೂರು - 560 001 ದೂರವಾಣಿ ಸಂಖ್ಯೆ : 080 22252329, 222353776, 22355984, 22384138
2. ಜಿಲ್ಲಾ ಮಟ್ಟ : ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ತಾಲೂಕು ಮಟ್ಟ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ.
4. ಬಾಲ್ಯ ವಿವಾಹ ನಿಷೇಧಾಧಿಕಾರಿಗಳು.

**"ಮಕ್ಕಳ ಬಾಲ್ಯ ಬದುಕು ಉಳಿಸಿ" (18 ವರ್ಷದೊಳಗಿಸವರೆಲ್ಲರೂ ಮಕ್ಕಳು)**

ಪ್ರಕಟಣೆ
ಸ್ಪಂದನ ಸಂಸ್ಥೆ
#95, ಮೊದಲನೇ ಅಡ್ಡ ರಸ್ತೆ,
ರುಕ್ಮಿಣಿ ನಗರ, ಬೆಳಗಾವಿ-590016
ಸಂಪರ್ಕಿಸಿ : 0831-2456293, ಮೊಬೈಲ್ - 9480189322

ಸಹಾಯ
A.E.I. Luxembourg,
Through TDH India Programme, Germany

# ಬಾಲ್ಯ ವಿವಾಹ ನಿಷೇಧ ಕಾಯ್ದೆ - 2006 ರ ಪ್ರಕಾರ ಬಾಲ್ಯವಿವಾಹ ಮಾಡುವುದು ಅಪರಾಧ

**18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ, 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ ಮಾಡುವುದು, ಮಾಡಿಸುವುದು ಅದಕ್ಕೆ ಸಾಕ್ಷಿಯಾಗುವುದು, ಭಾಗವಹಿಸುವುದು 'ಶಿಕ್ಷಾರ್ಹ ಅಪರಾಧ'**

**ಪೂಜಾರಿ ಸೇರಿದಂತೆ ಸಂಬಂಧಪಟ್ಟವರಿಗೆಲ್ಲಾ 2 ವರ್ಷ ಜೈಲು. 1 ಲಕ್ಷ ರೂ ದಂಡ**



## ಬಾಲ್ಯವಿವಾಹದ ದುಷ್ಪರಿಣಾಮಗಳು

- ಮದುವೆ ಆಗಿ ಕುಟುಂಬ ನಡೆಸಲು ಸಿದ್ಧರಾಗಿರುವುದಿಲ್ಲ.
- ಭೌದ್ಧಿಕವಾಗಿ, ಮಾನಸಿಕವಾಗಿ, ಶಾರೀರಿಕವಾಗಿ, ಸಾಮಾಜಿಕವಾಗಿ ಕುಟುಂಬದ ಹೊರೆ ಹೊರಲು ಸಮರ್ಥರಾಗಿರುವುದಿಲ್ಲ.
- ಗರ್ಭಧರಿಸಲು ಗರ್ಭಕೋಶ ಪೂರ್ಣ ಬೆಳವಣಿಗೆಯಾಗಿರುವುದಿಲ್ಲ.
- ಗರ್ಭಪಾತದ ಸಾಧ್ಯತೆ ಹೆಚ್ಚು
- ಅಪೌಷ್ಠಿಕತೆಯಿರುವ ಮಗುವಿನ ಜನನದ ಸಾಧ್ಯತೆ.
- ಮಕ್ಕಳು ಅಂಗವಿಕಲರಾಗುವ ಸಂಭವ.
- ಬೇಗ ವಯಸ್ಸಾದವರಂತೆ ಕಾಣುತ್ತಾರೆ.
- ಹೆಚ್ಚು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ.
- ಅತ್ಯಂತ ಕಷ್ಟಕರವಾದ ಹೆರಿಗೆ ಮತ್ತು ಅತಿಯಾದ ರಕ್ತ ಸ್ರಾವ.
- ಮೂಡನಂಬಿಕೆಗೆ ಕುಟುಂಬದ ಮತ್ತು ಮಕ್ಕಳ ಜೀವನ ಹಾಳಾಗುತ್ತದೆ.

## ☞ ಬಾಲ್ಯವಿವಾಹ ಎಂದರೇನು ?

- ಯಾವುದೇ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಅಥವಾ 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ ಮಾಡುವುದು ಬಾಲ್ಯವಿವಾಹ ಎಂದೆನಿಸಿಕೊಳ್ಳುತ್ತದೆ.

## ☞ ಕಾನೂನು ಏನು ಹೇಳುತ್ತೆ

- ಕಾನೂನು ಇಂತಹ ಮದುವೆ ಮಾಡುವುದನ್ನು ನಿಷೇಧಿಸಿದೆ. ಒಂದು ವೇಳೆ ಮಾಡಿದಲ್ಲಿ ವಧುವರರ ಕುಟುಂಬದವರ ಮೇಲೆ, ಸಂಘಟಕರ ಮೇಲೆ, ಪೂಜಾರಿ, ನಿರ್ದೇಶಿಸಿದವರು, ನೆರವೇರಿಸಿದವರು, ಕುಮ್ಮಕ್ಕು ನೀಡಿದವರು ಹಾಗೂ ಸಂಬಂಧಪಟ್ಟವರ ಮೇಲೆ, ಪ್ರಕರಣ ದಾಖಲು. ಅವರೆಲ್ಲರಿಗೂ 1 ಲಕ್ಷ ರೂ ದಂಡ, 2 ವರ್ಷ ಜೈಲು (ಸೆಕ್ಷನ್ - 9, 10, 11)

## ☞ ಪ್ರಕರಣ ದಾಖಲು ಹೇಗೆ ?

- ಬಾಲ್ಯವಿವಾಹ ನಿಷೇಧಾಧಿಕಾರಿಗಳು ನೀಡಿದ ಹೇಳಿಕೆಯ ಆಧಾರದ ಮೇಲೆ ಸಂಘಟಕರು ಪೋಷಕರು, ಕುಟುಂಬದವರು, ಭಾಗಿಯಾದವರು ಹಾಗೂ ಪೂಜಾರಿ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಕೋರ್ಟಿಗೆ ಹಾಜರುಪಡಿಸಲಾಗುವುದು.

## ಬಾಲ್ಯವಿವಾಹ ನಿಷೇಧಾಧಿಕಾರಿಗಳು ಯಾರು ?

- ಜಿಲ್ಲಾಧಿಕಾರಿಗಳು, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ತಹಶೀಲ್ದಾರರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಸಿಡಿಪಿಒ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಂದಾಯ ನಿರೀಕ್ಷಕರು,
- ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳು. ಹಾಗೂ ಎಲ್ಲಾ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು.

ಈ ಕಾಯ್ದೆಯಡಿ ಎಲ್ಲಾ ಅಪರಾಧಗಳು ವಿಚಾರಣಾರ್ಹ ಮತ್ತು ಜಾಮೀನು ರಹಿತ(ಸೆಕ್ಷನ್-15)